ದಿನಾಂಕಃ 28-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 1 ಮತ್ತು 2 ರವರ ಪರ ವಕೀಲರಿಂದ,

1) ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ದಾನ ಪತ್ರ ಮಾಡಿಕೊಟ್ಟಿರುವ ವಿಷಯ ದಾನ ಪತ್ರದ ನೋಡಿದ ಮೇಲೆ ಗೊತ್ತಾಗಿರುತ್ತದೆ. ಸದರಿ ದಾನ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾನ ಪತ್ರದ ಆಧಾರದ ಮೇಲೆ ಖಾತೆ ಮಾಡಬಾರದೆಂದು ನಾನು ತಕರಾರು ಸಲ್ಲಿಸಿರುತ್ತೇನೆ. ತಕರಾರು ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ದಾನ ಪತ್ರದಲ್ಲಿ ನಮೂದು ಮಾಡಿರುವ ಆಸ್ತಿ 1 ನೇ ಪ್ರತಿವಾದಿ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ನಿಶಾನೆ ಪಿ-06 ಕ್ರಯ ಪತ್ರದಲ್ಲಿ 1 ನೇ ಪ್ರತಿವಾದಿ ಹೆಚ್ ಎನ್ ಮೋಹನ ರವರಿಗೆ ರೂ. 3,20,000/- ಹಣ ಪಾವತಿ ಮಾಡಿದ ಬಗ್ಗೆ ನಮೂದು ಇರುತ್ತದೆ. ಸದರಿ ಪತ್ರಕ್ಕೆ ನನ್ನ ಮಾವ ಮತ್ತು 2 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿ 2 ರಲ್ಲಿ ಬ್ಯಾಂಕಿಗೆ ಆಧಾರ ಮಾಡಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಮೋಸ ಮಾಡಲು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ 2 ಪ್ರತಿವಾದಿ 1 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ